ಶ್ರೀ ಶಕ್ತಿ ಕ್ಷೇತ್ರ ಪಾಂಡುಕಲ್ಲು

ಶ್ರೀ ಕೋಟಿನಾಥ ಸನ್ನಿಧಿ

ಅದೊಂದು ಕಾಲ ಎಲ್ಲೆಲ್ಲೂ ಅರಣ್ಯ, ಇಂಥಹ ದಟ್ಟಾರಣ್ಯದ ಮಧ್ಯದಲ್ಲೊಂದು ವಿಶಾಲವಾದ ಬಂಡೆ. ಅದರ ಬಳಿಯಲ್ಲೇ ಸಮೃದ್ಧವಾದ ನೀರಾಶ್ರಯ. ಅಲ್ಲೊಂದು ಬೇಡರ ಕುಟುಂಬ, ಕಾಡಿನ ಉತ್ಪತ್ತಿಯನ್ನೇ ಅವಲಂಬಿಸಿ ಜೀವನ. ಈ ಕುಟುಂಬದ ಹಿರಿಯನೊಬ್ಬ ಮಹಾ ದೈವಭಕ್ತ. ಅವರು ವಾಸಮಾಡುವ ಆ ಬಂಡೆಯೇ ಅವರ ದೇವರು. ಪ್ರತಿದಿನ ಆ ಬಂಡೆಯನ್ನು ಶುಚಿಗೊಳಿಸಿ ತಾವು ತಿನ್ನುವ ಆಹಾರವನ್ನೇ ಅರ್ಪಣೆಮಾಡಿ ತಾವು ಸ್ವೀಕರಿಸುತ್ತಿದ್ದರು. ಬರಬರುತ್ತಾ ಕಾಡೆಲ್ಲಾ ನಾಶವಾಗಿ ಹೊಲ ಗದ್ದೆಗಳಾದವು. ಜೀವನಕ್ಕೆ ತೊಂದರೆ ಆದಾಗ ಅವರೆಲ್ಲರೂ ಬೇರೆ ಕ್ಡೆಗೇ ವಲಸೇ ಹೋಗಬೇಕಾಯಿತು. ಈ ಪ್ರದೇಶವೆಲ್ಲವೂ ಮುಂದೆ ವಿಜಯನಗರದರಸರ ಆಳ್ವಿಕೆಗೆ ಸೇರಿಕೊಂಡಿತು.

ವಿಜಯನಗರದರಸರ ಆಳ್ವಿಕೆಗೆ ಈ ಪ್ರದೇಶಕ್ಕೆ ಬಾರೂರೆನ್ನು ಸಂಸ್ಥಾನವಾಗಿಸಿಕೊಂಡು ಒಬ್ಬ ರಾಜಪ್ರತಿನಿಧಿಯನ್ನು ನೇಮಿಸಿಕೊಂಡು ಇಲ್ಲಿಹ ಪಾರುಪಶ್ಯ ಮಾಡುತ್ತಿದ್ದರು. ಸಂಸ್ಥಾನಕ್ಕೆ ಸಂಬಂಧಿಸಿದ ದೇವಾಲಯ, ಮಠ ಇತ್ಯಾದಿಗಳ ಜೀರ್ಣೋದ್ಧಾರ ಮಾಡಿಸಿದ್ದರು. ಹಾಗೆ ಜೀರ್ಣೋದ್ಧಾರ ಆದ ದೇವಾಲಯಗಳಲ್ಲಿ ಕೋಟೇಶ್ವರ ಕೋಟಿನಾಥೇಶ್ವರ ದೇವಾಲಯವೂ ಒಂದಾಗಿತ್ತು. ಈ ದೇವಾಲಯದ ಎಲ್ಲಾ ಕಡೆಗಳಲ್ಲಿ ಕೆಲವು ಕೇರಿಗಳನ್ನು ರಚಿಸಿದೇಶದ ಎಲ್ಲಾ ಕಡೆಯಿಂದ ಪುರೋಹಿತರೂ, ಪ್ರಾಜ್ಞರೂ ಆದ ಬ್ರಾಹ್ಮಣ ಕುಟುಂಬದವರನ್ನು ಬರಮಾಡಿಕೊಂಡು ಅವರಿಗೆ ಆಶ್ರಯವನ್ನಿತ್ತು ಪೋಷಿಸುತ್ತಾ ಬಂದವರು ವಿಜಯನಗರದ ಅರಸರು.

ಹೀಗೆ ಇಲ್ಲಿಗೆ ಬಂದು ಸೇರಿದ ಬಡಕೇರಿಯಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣ ಕುಟುಂಬ ಬುದ್ಧಿವಂತರು ಸಂಸ್ಥಾನದ ಉನ್ನತ ಹುದ್ದೆಯಲ್ಲಿ ಸೇರಿಕೊಂಡರು. ಬರಬರುತ್ತ ಎವರು ಜೀವನ ನಿರ್ವಹಣೆಗಾಗಿ ಪಾಂಡುಕಲ್ಲು ಎಂಬ ಈ ಸ್ಥಳಕ್ಕೆ ಬಂದು ವ್ಯವಸಾಯವನ್ನು ತಮ್ಮ ಕಸುಬನ್ನಾಗಿ ಮಾಡಿಕೊಂಡರು. ಅವರೇ ಬಡಕೇರಿಯಿಂದ ಬಂದ ಬಡ್ಕಿಲಾಯ ವಂಶಸ್ಥರು.

ದೈವಭಕ್ತರಾದ ಇವರು ಕೋಟೇಶ್ವರ ಕೋಟಿನಾಥೇಶ್ವರ ದೇವರ ಪರಮ ಭಕ್ತರಾಗಿದ್ದರು. ಆ ಒಂದು ಕಾರಣಕ್ಕಾಗಿ ಈ ಬಡ್ಕಿಲಾಯ ವಂಶದ ಹಿರಿಯರು ಅಲ್ಲಿಯ ದೇವಲದ ಜಾತ್ರೆಗೆ ೧೨ ಮುಡಿ ಅಕ್ಕಿಯನ್ನು ಕಳುಹಿಸುತ್ತಿದ್ದರು. ಹಲವಾರು ವರ್ಷಗಳಿಂದಲೂ ಇದು ನಡೆದು ಬಂದ ಒಂದು ಪದ್ಧತಿಯಾಗಿತ್ತು. ಅದನ್ನು ಈ ಕುಟುಂಬದವರು ಅನಾಚೂನವಾಗಿ ನಡೆಸಿಕೊಂಡು ಬರುತ್ತಿದ್ದರು.

ಒಮ್ಮೆ ಕೋಟೇಶ್ವರ ಜಾತ್ರೆಯ ಸಮಯ ಅತಿಯಾಗಿ ಮಳೆ ಸುರಿಯುತ್ತಿದ್ದು ನದಿಗಳೆಲ್ಲ ತುಂಬಿ ಹರಿಯುತ್ತಿದ್ದು ದೇವರಿಗೆ ಸಲ್ಲಿಸಬೇಕಾಗಿದ್ದ ಅಕ್ಕಿಯನ್ನು ಸಲ್ಲಿಸಲಾಗಲಿಲ್ಲ. ಇದರಿಂದ ದು:ಖಿತರಾದ ಬಡ್ಕಿಲಾಯ ಹಿರಿಯರು ನನ್ನ ತಪ್ಪನ್ನು ಮನ್ನಿಸು ಎಂದು ಆ ದೇವರಿಗೆ ಮೊರೆಯಿಟ್ಟು ವ್ಯಥೆಯಿಂದ ಪದೇ ಪದೇ ತಪ್ಪಿಗಾಗಿ ವ್ಯಥಿಸುತ್ತಾ ಇದ್ದರು. ಆ ರಾತ್ರಿ ಅವರಿಗೊಂದು ಕನಸಾಯಿತು. ಕನಸಿನಲ್ಲಿ ತನ್ನ ಆರಾಧ್ಯ ದೈವವನ್ನು ಕಂಡರು. ತನ್ನ ತಪ್ಪಿಗಾಗಿ ಕಂಬನಿಗರೆದರು. ಆಗ ಕೋಟಿಲಿಂಗೇಶ್ವರನು ಅವರಿಗೆ ಅಭಯವನ್ನಿತ್ತು, ಭಕ್ತ ನೀನು ದು:ಖಿಸಬೇಡ, ವ್ಯಥೆ ಪಡಬೇಡ, ನಿನ್ನ ಈ ಮನೆಯ ಪಡುಭಾಗದಲ್ಲಿರುವ ಬಂಡೆಯುಉ ಶಿವಶಕ್ತಿಯಿಂದ ಕೂಡಿದ ಶಕ್ತಿ ಕೇಂದ್ರವಾಗಿದೆ. ಅದೇ ಬಂಡೆಯಲ್ಲಿರುವ ಭತ್ತ ಕುಟ್ಟುವ ಓರಳಿನಲ್ಲಿ ನಿನ್ನ ಮನೆದೇವರಬಿ ನಾನು ಮೂಡಿ ಬರುತ್ತೇನೆ. ಇಲ್ಲಿ ದೇವಸ್ಥಾನ ಕಟ್ಟಿ ನೀನು ಹಗೂ ನಿನ್ನ ಕುಟುಂಬದವರು ನನ್ನನ್ನು ಪೂಜಿಸುತ್ತಾ ಬನ್ನಿರಿ. ನನ್ನ ಇಲ್ಲಿಯ ಸನಿಧಿಗೆ ನೀವು ಸಲ್ಲಿಸುತ್ತಾ ಬಂದಿರುವ ಆ ಅಕ್ಕಿಯನ್ನು ಇಲ್ಲಿಯ ಪೂಜಾರಿಗಳಿಗೆ ವಿನಿಯೋಗಿಸುತ್ತಾ ಬನ್ನಿರಿ. ಹೆಂಗಸೊಬ್ಬಳು ಭತ್ತ ಕುಟ್ಟುವಾಗ ಆ ಕುಳಿಯಲ್ಲಿ ರಕ್ತ ಕಂಡು ಮೂರ್ಛೆ ಹೋಗುತ್ತಾಳೆ. ಅದೇ ಕುಳಿಯನ್ನು ಕುಂಭದಿಂದ ೪೮ ದಿನಗಳ ಕಾಲ ಮುಚ್ಚಿರಿ. ಆಗ ನಾನು ನಿಮ್ಮ ಭಕ್ತನಾಗಿ ಮೂಡಿ ಬರುವೆ ಎಂಬ ಕನಸು ಕಂಡರು.

ಕನಸಿನಂತೆ ಎಲ್ಲವೂ ನಡೆಯುತ್ತಿತ್ತೋ ಏನೊ? ಕುತೂಹುಲಿಗಳಾದ ಇವರು ೧೨ ದಿನಕ್ಕೆ ಮುಚ್ಚಿದ ಕುಂಭವನ್ನು ತೆಗೆದಾಗ ಕುಳಿಯನ್ನು ಮುಚ್ಚುವಷ್ಟು ಮಾತ್ರ ಲಿಂಗವು ಮೂಡಿ ಬಂದಿತ್ತು. ಶಿವ ಪ್ರೇರಣೆಯಂತೆ ದೇವಾಲಯವನ್ನು ನಿರ್ಮಿಸಿ ಪೂಜಾದಿಗಳನ್ನು ನೆರವೇರಿಸುತ್ತಾ ಬಂದರು. ಶ್ರೀ ದೇವರ ಪರವಭಕ್ತರಾದ ಹಿರಿಯನಿಗೆ ವಾಕ್ ಶಕ್ತಿಯಿದ್ದು ಭಕ್ತಾದಿಗಳ ಆಶೋತ್ತರಗಳನ್ನು ಈಡೇರಿಸುವ ಶಕ್ತಿಯಿತ್ತು. ಶ್ರೀ ದೇವರ ವರಬಲದಿಂದ ಪ್ರಭಾವಿ ವ್ಯಕ್ತಿಗಳಾಗಿ ಬೆಳೆದರು ಹಾಗೆ ತಳಮನೇಯವರು ಎಂಬುವುದಕ್ಕೂ ಪಾತ್ರರಾದರು.

ಈ ಎಲ್ಲಾ ಪ್ರದೇಶಗಳು ವಿಜಯನಗರ ಆಳ್ವಿಕೆ ಕೊನೆಗೊಂಡಾಗ ಸೂರಾಲು ಬಲ್ಲಾಳ ಅರಸರ ಅಧೀನಕ್ಕೆ ಬಂತು. ಅಂಥಹ ಒಂದು ಕಾಲದಲ್ಲಿ ಸೂರಾಲು ಬಲ್ಲಾಳರ ಮನೆಯಲ್ಲಿ ಅರಸೊತ್ತಿಗೆಯ ವಿಚಾರವಾಗಿ ಜಗಳ ಉಂಟಾಗಿ, ಹೆಣ್ಣೊಬ್ಬಳ ಹತ್ಯಯ ಸಂಚು ನಡೆದಾಗ, ಆ ಹೆಣ್ಣು ಮಗಳಿಗೆ ಪಾಂಡುಕಲ್ಲು ಬಡ್ಕಿಲಾಯ ಹಿರಿಯರು ತಮ್ಮ ಮನೆಯಲ್ಲಿ ರಕ್ಷಣೆ ಇತ್ತರು. ಆಕೆ ಆಗ ತುಂಬು ಗರ್ಭಿಣಿಯಾಗೆದ್ದಳು. ಅವಳು ಈ ಮನೆಯ ನೆಲ ಮಾಳಿಗೆಯಲ್ಲೆ ಎರಡು ಮಕ್ಕಳಿಗೆ ಜನ್ಮ ನೀಡಿದಳು. ಮುಂದೆ ವಾದ ವಿವಾದ ಪಂಚಾಯಿತಿಗೆ ನಡೆದು ಸೂರಾಲು ಅರಮನೆಗೆ ಈಕೆಯೇ ಪಟ್ಟಕ್ಕೆ ಬಂದಳು. ಈ ಒಂದು ರಕ್ಷಣೆಯನ್ನು ಒದಗಿಸಿ ತನಗೆ ಅಧಿಕಾರ ಪ್ರಾಪ್ತಿ ಆಗುವಂತೆ ಮಾಡಿದ ಬಡ್ಕಿಲಯ ಕುಟುಂಬದ ಪ್ರಭ್ಹಾವಿ ವ್ಯಕ್ತಿಗೆ ಅರಸಿಯಿ ಹಲವ್ರೊಂದು ಊರುಗಳನ್ನು ಉಂಬಳಿಯಾಗಿ ಇತ್ತಳು. ಕೋಟಿನಾಥನ ಶಾಶ್ವತ ಪ್ರೂಜೆಗೆ ಅನುವು ಮಾಡಿಕೊಟ್ಟಳು. ಇದರಿಂದಾಗಿ ಈ ದೇವಳದ್ ಉತ್ಸವಾ ದಿನಗಳು ವಿಜ್ರಂಭಣೆಯಿಂದ ನಡೆದು ಅನ್ನದಾನಕ್ಕೂ ಹೆಸರಾಯಿತು ಮುಂದೆ ಈ ಬಡ್ಕಿಲಾಯ ಕುಟುಂಬದ ಒಬ್ಬಳೇ ಮಗಳಿಗೆ ಕೊಡಂಚ ಕುಟುಂಬದ ವರನಿಗೆ ಕೊಟ್ಟು ಮದುವೆ ಮಾಡಿಸಿದರು. ಆ ಹೆಣ್ಣು ಮಗಳು ನಿಮಗೆಲ್ಲಾ ಇದೆ ಆದರೆ ನನಗೇನಿದೆ ಜೀವನಕ್ಕೆ ಎಂದು ಕೇಳಿದಾಗ ನೀನು ಇಲ್ಲಿಯ ಹೆಣ್ಣು ಮಗಳು ನಿನಗೆ ಯಾವ ತರಹದ ಕೊರತೆಯೂ ಆಗಬಾರದು ಅದಕ್ಕಾಗಿ ನಿನ್ನ ಪತಿಗೆ ಪ್ರೂಜೆಗೊಂದು ಮಠ ಹಾಗೆಯೇ ಅದರ ವಿನಿಯೋಗಕ್ಕಾಗಿ ಹೊಲಗದ್ದೆ ಕಂಬಳಗದ್ದೆಯನ್ನೂ ಕೊಡುತ್ತೇವೆ ಎಂದು ಒಂದು ಮಠವನ್ನೂ ಅದರಲ್ಲಿ ಗಣಪತಿ ಮತ್ತು ವೆಂಕಟೇಶ ಮೂರ್ತಿಯನ್ನು ಪ್ರತಿಷ್ಠಿಸಿ ಕೊಟ್ಟರು. ಹೀಗೆಯೇ ಅನ್ಯೋನ್ಯವಾಗಿ ಬಾಳಿ ಬದುಕಿದ ಈ ಎರಡು ಕುಟುಂಬಗಳಲ್ಲಿ ಸಣ್ಣ ಕಾರಣಕ್ಕಾಗಿ ಭಿನ್ನಾಭಿಪ್ರಾಯ ಬಂದಿತು. ಎರಡು ಕುಟುಂಬದ ಜನರು ಪ್ರಭಾವಿಗಳೇ ಆದರೆ ಜಿದ್ದಿಗೆ ಬಿದ್ದ ಈ ಕುಟುಂಬಗಳು ಕೋರ್ಟು ಮೆಟ್ಟ್ಲೇರಿದವು. ಪ್ರೂಜೆ ಮಾಡುತಿದ್ದ ಕುಟುಂಬ ದಾಖಲೆಗಳನ್ನಿತ್ತು ಸಾಬೀತು ಮಾಡಲು ಹೊರಟಾಗಿ ಇನ್ನೊಂದು ಕುಟುಂಬ ಅಲ್ಲಿ ದೇವರೇ ಇಲ್ಲ ಎಂದು ಸಾಧಿಸಿತು. ತಪಾಸಣೆಗಾಗಿ ಜಿಲ್ಲಾ ಕಲೆಕ್ಟರರೇ ಬರುವುದೆಂದು ನಿಗದಿಯಾಯಿತು.

ಅವರು ಬರುವ ಮುನ್ನದಿನ ಪ್ರಭಾವಿ ವ್ಯಕ್ತಿಗಳಾದ ಬಡ್ಕಿಲಾಯ ಕುಟುಂಬಿಕರು ರಾತ್ರೋರಾತ್ರಿ ಅಲ್ಲಿಯ ವಿಗ್ರಹಗಳನ್ನು ಕಿತ್ತು ತಮ್ಮ ಕೋಟಿನಾಥ ದೇವಾಲಯದಲ್ಲಿರಿಸಿಕೊಂಡರು. ಪರಿಶೀಲನೆಗೆ ಬಂದ ಅಧಿಕಾರಿಗಳು ದೇವರಿಲ್ಲದ್ದನ್ನ ಕಂಡು ಕೊಡಂಚ ಮನೇವನದ ಹೇಳಿಕೆ ಸುಳ್ಳು ಎಂದು ತೀರ್ಪಿತ್ತರು. ಇದರಿಂದ ವ್ಯಥಿತರಾದ ಅವರು ಮರಣಸಿದರೆಂದು ಹೇಳುತ್ತಾರೆ. ಹೀಗೆ ಒಂದಾಗಿದ್ದ ಕುಟುಂಬಿಕರು ಬೇರೆಬೇರೆಯಾದರು. ಇತ್ತೀಚಿನ ದಿನಗಳಲ್ಲಿ ಬೇರೆಯಾಗಿದ್ದ ಈ ಕುಟುಂಬ ಒಂದಾಗಿ ದುಡಿಯುತ್ತಿದ್ದಾರೆ. ಪರಮ ಭಕ್ತಿಯಿಂದ ಶ್ರೀ ದೇವರ ಸೇವೆಯನ್ನು ಮಾಡುತ್ತಿದ್ದಾರೆ.

ಮುಂದೆ ಬಟ್ಟಂಬಳ್ಳಿ ಎಂಬಲ್ಲಿದ್ದ ಅಜೀರ್ಣ ಸ್ಥಿತಿಯಲ್ಲಿದ್ದ ಗದ್ದಿಗೆ ಅಮ್ಮನವರನ್ನು ಇಲ್ಲಿಯೇ ಪ್ರತಿಷ್ಠಿಸಿದರು. ಕಾಲ ಕಳೆದಮ್ದತ್ ಈ ಬಡ್ಕಿಲ್ಲಾಯ ವಂಶಸ್ಥರು, ಶ್ರೀದೇವರ ಅನುಗ್ರಹಕ್ಕೆ ಪಾತ್ರರಾಗಿ, ಪ್ರಭಾವಿ ವ್ಯಕ್ತಿಗಳಾಗಿ, ಗ್ರಾಮ ಮುಖಂಡರಾಗಿ ಶಿವಪುರ ಗ್ರಾಮದಲ್ಲಿದ್ದ ಅಜೀರ್ಣವಾಸ್ಥೆಯಲ್ಲಿದ್ದ ಬ್ರಹ್ಮ ಬೈದರ್ಕಳ ಗರಡಿಯನ್ನೂ ದೇವಳದ ಸಮೀಪ ಕಟ್ಟಿಸಿ ನೇಮೋತ್ಸವಗಳನ್ನು ನಡೆಸುತ್ತಾ ಬಂದರು.

ಬೇಡ ಜನಾಂಗ ಪೂಜಿಸುತ್ತ ಬಂದ ಈ ಬಂಡೆ ಮಹಾ ಶಿವಸಾನಿಧ್ಯವನ್ನು ಹೊಂದಿರುವ ಈ ಬಂಡೆಯ ಮೇಲೆ ಶ್ರಿ ಕೋಟಿನಾಥ ಮಹಾಗಣಪತಿ, ಶ್ರೀ ವೆಂಕಟರಮಣ, ಅನ್ನಪೂರ್ಣೇಶ್ವರಿ ಅಮ್ಮ ಶಿವರಾಯ, ಕೊಡಮಂತಾಯ, ಕೋಟೆ ಚೆನ್ನಯ್ಯ, ಅಬ್ಬುಕದಾರಕ್ಕ, ಬೊಬ್ಬರ್ಯ, ಶ್ರೀನಾಗ ಎಲ್ಲ ಶಕ್ತಿಯು ಒಟ್ಟು ಸೇರಿರುವುದು ಒಂದು ಪವಾಡವೇ ಸರಿ.

ಈ ಎಲ್ಲಾ ದೇವರ ಸಾನಿಧ್ಯ ಶಕ್ತಿಯಿಂದ ಕೂಡಿದ ಈ ಕ್ಷೇತ್ರದಿಂದ ಇಷ್ಟಾರ್ಥ ಸಿದ್ಧಿಯಾಗುವುದರೊಂದಿಗೆ ಸಹಸ್ರಾರು ಭಕ್ತರನ್ನು ಆಕರ್ಷಿಸುವ ಪುಣ್ಯಕ್ಷೇತ್ರ ಎನಿಸಿದೆ ಈ ಪಾಂಡುಕಲ್ಲು.

ಈ ಕ್ಷೇತ್ರದ ಸಮೀಪ ಅರಮನೆ ದಿಬ್ಬವಿದೆ. ಇದರಲ್ಲಿ ಕೆಲವು ಕಲ್ಲಿನ ಗೂಟಗಳಿವೆ ಇಲ್ಲಿ ಆನೆಗಳನ್ನು ಕಟ್ಟುತ್ತಿದ್ದರು ಎಂಬ ಅಂಬೋಣ, ಇಲ್ಲಿಯೇ ಪ್ರಾಕೃತಿಕವಾಗಿ ರಚನೆಗೊಂಡ ಜೋಗಿ ಮೋಳ ಎಂಬ ಗುಹೆ ಇದೆ. ಇದರೊಳಗೆ ತುಂಬಾ ಜಾಗವಿದೆ. ಈಗ ಪ್ರಾಣಿಗಳಾದ ಬಾವುಲಿ, ಹಾವುಗಳ ವಾಸಸ್ಥಳವಾಗಿದೆ. ಇದು ಚಾರಿತ್ರಿಕ ಹಿನ್ನೆಲೆಯಿರುವ ಸ್ಥಳಗಳು.

ಈ ಹಿಂದೆ ಸೂರಾಲು ಅರಮನೆಯಿಂದ ಉಚಿತವಾಗಿ ಬಂದ ಎರಡು ಮಕ್ಕಳು ಮಲಗಬಹುದಾದಂತ ತೊಟ್ಟಿಲು (ಈಗಲೂ ಇದೆ) ಚೆನ್ನಿಮಣೆಗಳು (ಈಗಲೂ ಇದೆ) ಬೆಳ್ಳಿಯ ಅವಲಕ್ಕಿ ಕುಟ್ಟುವ ಜಿಡ್ಡೆ, ಚಿನ್ನದ ಬಲಿಗೆ (ಇದು ಕೆರೆಯಲ್ಲಿ ಮುಳುಗಿಸಲ್ಪಟ್ಟದೆಯಂತೆ, ) ಓಲೆಗರಿಯ ದಾಖಲೆಗಳು, ಎಣ್ಣೆ ಕಪಡೆ ದಾಖಲೆಗಳ್ಯ್ ದೇವರ ಆಭರಣ ದಂಡಿಗೆ ( ) ಈ ಎಲ್ಲವನ್ನು ದೊಡ್ಡಮನೆಯಲ್ಲಿ ಕಾಣಬಹುದಾಗಿದೆ.

ಬಡ್ಕಿಲ್ಲಾಯ ವಂಶದ ಪೂರ್ವಜರು ರಾಜಾಶ್ರಯ ದಿಂದಲೇ ಬಂದವರು. ದರ್ಪ, ಯಜಮಾನಿಕೆ ಆಡಳಿತ ಎಲ್ಲವೂ ಅಂದಿನದೇ. ಈ ತಲೆಮಾರಿನ ಹಿಂದಿನವರು ಸ್ತ್ರೀಲೋಲರಾಗಿದ್ದು ಸೂರಾಲಿನಿಂದ ನರ್ತನ ಸೇವೆಗಾಗಿ ಬಂದ ನರ್ತಕಿಯರನ್ನು ತಮ್ಮ ಶೋಕೀಜೀವನಕ್ಕೆ ಉಪಯೋಗಿಸುತ್ತಿದ್ದರೆಂಬ ಹೇಳಿಕೆ.

ಈಗ ಇಲ್ಲಿರುವ ಈ ಬಡ್ಕಿಲ್ಲಾಯ ಕುಟುಂಬಗಳು ೫ ಪೂಜಾಸರದಿ ೨ ಕುಟುಂಬಿಕರಿಗೆ ಈ ದೇವಳದಲ್ಲಿ ವರ್ಷಂಪ್ರತಿ ನಡೆವ ಉತ್ಸವಾದಿಗಳು ಹೀಗಿವೆ – ರಂಗೋತ್ಸವ, ಕೆಂಡೋತ್ಸವ, ನೇಮೋತ್ಸವ, ಕಾಯಿದಪೂಜೆ, ಮಂಡಲಸೇವೆ, ಕಂಬಳ, ನವರಾತ್ರಿ ಪೂಜೆ.

ಇಲ್ಲಿ ಈ ಶಕ್ತಿಕ್ಷೇತ್ರದ ಮಹಿಮೆ ಅಪಾರ. ಕಳ್ಳತನ, ವಂಚನೆ, ಮೋಸ, ಸಂಕಷ್ಟಗಳಿಗೆ ನಿಲುಕಿದ ಭ್ಕಾದಿಗಳು ಇಲ್ಲಿಗೆ ಬಂದು ಶ್ರೀ ದೇವರಲ್ಲಿ ದೂರು ಕೊಡುತ್ತಿದ್ದರು (ಹ್ಯೊಲು) ಇದು ಇಲ್ಲಿ ಇತ್ಯರ್ಥವಾಗಿ ಭಕ್ತಾದಿಗಳು ಸಂತಸ ಪಡುತ್ತಿದ್ದರು. ಇಲ್ಲಿ ಬರುವ ದೂರುಗಳೆಲ್ಲ ಶ್ರೀ ಶಿವರಾಯ ಸನ್ನಿಧಿಯಲ್ಲಿ ತೀರ್ಮಾನವಾಗಿ ಸುಖಾಂತವಾಗುತ್ತಿತ್ತು.

ಇತ್ತೀಚೆಗೆ ಶ್ರೀಕೋಟಿನಾಥ ದೇವಾಲಯ ಶ್ರೀಗಣಪತಿ ಗುಡಿ, ವೆಂಕಟರಮಣ ಗುಡಿ, ಕೋಟಿಚೆನ್ನಯ್ಯ ಗರಡಿ, ಎಲ್ಲಾ ಜೀರ್ಣೋದ್ಧಾರಗೊಂಡಿದ್ದು ಊರ, ಪರಊರ ಭಕ್ತಾದಿಗಳ ಶ್ರದ್ಧಾ ಭಕ್ತಿ ಕೇಂದ್ರವಾಗಿ ಕಂಗೊಳಿಸುತ್ತಿದೆ.

ಇನ್ನೂ ಕೆಲವೊಂದು ಕೆಲಸಗಳು ಇಲ್ಲಿ ಆಗಬೇಕಾಗಿದ್ದು ಊರ, ಭಕ್ತಾದಿಗಳೂ ಸ್ಥಳವಂದಿಗಳೂ ಆರ್ಥಿಕ ಸಹಾಯವನ್ನು ಎದುರುನೋಡುತ್ತಿದ್ದಾರೆ.